**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೆ. ಆರ್. ಪುರಂ**

O.S. No 802/2025
PW: 1

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 05.03.2026**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ: ಶ್ರಿ . ಬಿ.ಎಸ್.ಜಿ ರವರಿಂದ**

2. ದಾವಾ ಸ್ವತ್ತು ಕೃಷಿ ಜಮೀನಾಗಿದ್ದು ನಾನು ಅದರಲ್ಲಿ ರಾಗಿ ಬೆಳೆಯನ್ನು ಬೆಳೆದಿರುತ್ತೇನೆ. ಬೆಳೆ ಬೆಳೆದಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತಿನ ಮೇಲೆ ಅಸಲು ದಾವಾ ಸಂಖ್ಯೆ 977/2009 ಎಂಬ ದಾವೆ ವಿಚಾರಣೆ ಹಂತದಲ್ಲಿರುತ್ತದೆ. ಸದರಿ ದಾವೆಯನ್ನು ನಾನು ನನ್ನ ತಂದೆ, ತಮ್ಮ ಹಾಗೂ ಇತರರ ವಿರುದ್ದ ಸಲ್ಲಿಸಿರುತ್ತೇನೆ. ಸದರಿ ದಾವೆಯನ್ನು ನಾನು ವಿಭಾಗ ಕೋರಿ ಸಲ್ಲಿಸಿರುತ್ತೇನೆ. ಸದರಿ ದಾವೆಯು ಪ್ರಸ್ತುತ ಸುನಾವಣೆಗಾಗಿ ಕಾಯ್ದಿರಿಸಲಾಗಿದೆ. ದಾವಾ ಸ್ವತ್ತು ಮೂಲತಃ ನಮ್ಮ ತಂದೆಯ ತಂದೆಗೆ ಸೇರಿದ್ದು, ಸನ್ 1968 ರಲ್ಲಿ ನಮ್ಮ ತಂದೆಗೆ ಹಂಚಿಕೆಯಾಗಿರುತ್ತದೆ.

3. ದಿನಾಂಕ 20.02.1992 ರಂದು ದಾವಾ ಸ್ವತ್ತಿನ ಕುರಿತಂತೆ ನಮ್ಮ ತಂದೆಯವರು ಅನಂತಪ್ಪರವರಿಗೆ ನೊಂದಾಯಿತ ಜಿಪಿಎ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಿಪಿಎ ಆಧಾರದ ಮೇಲೆ ಅನಂತಪ್ಪರವರು ದಾವಾ ಸ್ವತ್ತಿನಲ್ಲಿ ಬಡಾವಣೆ ನಿರ್ಮಾಣ ಮಾಡಿ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಅಭಿವೃದ್ದಿಪಡಿಸಿದ ನಿವೇಶನ ಸಂಖ್ಯೆ 4 ಅನ್ನು ಅನಂತಪ್ಪರವರು ಜಿಪಿಎ ಆಧಾರದ ಮೆಲೆ ಶೇಷಾದ್ರಿರವರಿಗೆ ದಿನಾಂಕ 06.11.1992 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರೇ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 20.01.2016 ರಂದು ಸದರಿ ಶೇಷಾದ್ರಿರವರ ವಾರಸ್ಸುದಾರರು ನಿವೇಶನ ಸಂಖ್ಯೆ 04 ಅನ್ನು 01 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಬಡಾವಣೆ ನಿರ್ಮಾಣ ಮಾಡಿ ನಿವೇಶನಗಳನ್ನು ಅಭಿವೃದ್ದಿಪಡಿಸಿದ್ದರಿಂದ ದಾವಾ ಸ್ವತ್ತು ಕೃಷಿ ಜಮೀನು ಆಗಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ.

4. ನಿವೇಶನ ಸಂಖ್ಯೆ 38 ಅನ್ನು ವಿದ್ಯಾ ಎಂಬುವವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ನಿವೇಶನವನ್ನು 02 ನೇ ಪ್ರತಿವಾದಿಯ ಮಗ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. _02 ನೇ ಪ್ರತಿವಾದಿ ಹಾಗೂ ಆತನ ಮಗ ಸದರಿ

ನಿವೇಶನದಲ್ಲಿ ಮನೆ ನಿರ್ಮಾಣ ಮಾಡಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. **ಸಾಕ್ಷಿಯು ಸದರಿ ಮನೆಯ ಛಾಯಾಚಿತ್ರವನ್ನು ನೋಡಿ ಒಪ್ಪಿದ್ದರಿಂದ ಸದರಿ ಛಾಯಾಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು.** ದಾವಾ ಸ್ವತ್ತಿನಲ್ಲಿ ರಾಗಿ ಬೆಳೆ ಬೆಳೆಯುತ್ತಿದ್ದೇನೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ**
**ದರ್ಜೆನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ,**
**ಕೆ. ಆರ್. ಪುರಂ**